## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ.ನಂ. 249/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಕುಮಾರ |
| ತಂದೆಯ ಹೆಸರು | : | ಜವರಯ್ಯ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸಸ್ಥಳ | : | ಹೆಗ್ಗಡಾಪುರ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 17.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-1 ಪರಿಚಯವಿರುತ್ತದೆ. ಅವರು ನಮ್ಮ ಪಕ್ಕದ ಮನೆಯವರು. ಚಾಸಾ-4 ರವರ ಪರಿಚಯವಿರುತ್ತದೆ. ಅವರು ನಮ್ಮ ಊರಿನ ಯಜಮಾನರು. ಕಳೆದ 03 ವರ್ಷಗಳ ಹಿಂದೆ ಚಾಸಾ-1 ರವರ ಜಮೀನಿನ ಬಳಿ ಗಲಾಟೆಯಾದ ಸಂಬಂಧ ಗಲಾಟೆಯ ಮರುದಿನ ಪೋಲೀಸರು ಜಮೀನಿನ ಬಳಿ ಬಂದಿದ್ದು ಅಲ್ಲಿ ಮಹಜರ್ ಮಾಡಿ ಮಚ್ಚು ಹಾಗು ಚಪ್ಪಲಿಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನಾನು, ಚಾಸಾ-1 ಹಾಗು ಪೋಲೀಸರು ಇದ್ದಿದ್ದೆವು. ಸದರಿ ಮಹಜರ್ ಅನ್ನು ಪೋಲೀಸರು ಸಂಜೆ ಸುಮಾರು 04.30-05.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಸಾಕ್ಷಿಗೆ ನಿ.ಪಿ.-2 ಅನ್ನು ತೋರಿಸಲಾಗಿ ಸಾಕ್ಷಿ ಅದು ಮೇಲೆ ಹೇಳಿದಂತೆ ಮಹಜರ್ ಎಂದು ಗುರುತಿಸಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ನಿ.ಪಿ.-2 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.-2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲು-1 ಮತ್ತು ಮುದ್ದೆಮಾಲು-2 ಅನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ. ಎಂ.ಎನ್.ಆರ್. / ಶ್ರೀ. ಬಿ.ವಿ.ಎಸ್. ವಕೀಲರಿಂದಃ**

ಮಹಜರ್ ಗೆ ಬರುವಂತೆ ತಿಳಿಸಿ ಪೋಲೀಸರು ನನಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ. ಮಹಜರ್ ಸಮಯದಲ್ಲಿ ನಾನು ಹಾಗು ಚಾಸಾ-1 ರವರು ಮಾತ್ರ ಇದ್ದಿರುತ್ತೇವೆ. ಮಹಜರ್ ಸಮಯದಲ್ಲಿ ಪೋಲೀಸರು ಯಾವುದೇ ಕಚ್ಚಾ ನಕಾಶೆ ತಯಾರಿಸಿರುವುದಿಲ್ಲ ಹಾಗು ಯಾವುದೇ ಫೋಟೋ ತೆಗೆದಿರುವುದಿಲ್ಲ. ಪೋಲೀಸರು ಅಮಾನತ್ತುಪಡಿಸಿಕೊಂಡಿದ್ದರು ಎಂದು ಹೇಳಲಾದ ಮುದ್ದೆಮಾಲು-1 ಹಾಗು ಮುದ್ದೆಮಾಲು-2 ರ ಮೇಲೆ ನನ್ನ ಸಹಿ ಇರುವ ಯಾವುದೇ ಚೀಟಿ ಅಂಟಿಸಿರುವುದಿಲ್ಲ. ನಾನು ಯಾವುದೇ ಕೃತ್ಯ ನಡೆಯಲಾಯಿತೆಂದು ಹೇಳಲಾದ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗು ಅಲ್ಲಿ ಪೋಲೀಸರು ನನ್ನ ಸಮಕ್ಷಮ ನಿ.ಪಿ.-2 ರಂತೆ ಮಹಜರ್ ಕ್ರಮ ಜರುಗಿಸಿ ಯಾವುದೇ ಮುದ್ದೆಮಾಲು-1 ಹಾಗು ಮುದ್ದೆಮಾಲು-2 ಅನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಬದಲಾಗಿ ಸದರಿ ಮಹಜರ್ ಗೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಊರಿನವರಾಗಿದ್ದು ಮತ್ತು ಪರಿಚಯಸ್ಥರಾಗಿದ್ದು ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**